**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ,**

**ಚಿಕ್ಕನಾಯಕನಹಳ್ಳಿ**

**ಸಿ.ಸಿ. ನಂ.542/2024**

**ಸಿ ಡಬ್ಲ್ಯೂಃ 5**

**ಪಿ ಡಬ್ಲ್ಯೂಃ 9**

| | | |
|---|---|---|
| ಹೆಸರು | : | ಚಂದ್ರಮ್ಮ |
| ಗಂಡನ ಹೆಸರು | : | ಗವಿರಂಗಯ್ಯ |
| ವಯಸ್ಸು | : | 50 ವರ್ಷ |
| ಉದ್ಯೋಗ | : | ವ್ಯವಸಾಯ |
| ವಾಸಸ್ಥಳ | : | ಹುಚ್ಚನಹಳ್ಳಿ |

**ದಿನಾಂಕಃ 17.03.2026 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಎ ಪಿ ಪಿ ರವರಿಂದಃ**

ನಾನು ಆರೋಪಿಯನ್ನು ನೋಡಿರುತ್ತೇನೆ. ಅವರು ನಮ್ಮ ಗ್ರಾಮದವರಾಗಿರುತ್ತಾರೆ. ಈಗ್ಗೆ ಸುಮಾರು 2 ವರ್ಷಗಳ ಹಿಂದೆ ನಾನು ಚಾಸಾ2 ರಿಂದ 4,6, 7 ನಮ್ಮ ಗ್ರಾಮದಿಂದ ಗವಿರಂಗನಾಥಸ್ವಾಮಿ ಬೆಟ್ಟಕ್ಕೆ ಟ್ರಾಕ್ಟರ್ ನಲ್ಲಿ ಹೋಗಿದ್ದೇವೆ. ಸದರಿ ದಿವಸ ಬೆಳಗ್ಗೆ 9 ಗಂಟೆಗೆ ನಮ್ಮ ಗ್ರಾಮದಿಂದ ಹೋಗಿ ದೇವರ ದರ್ಶನ ಮಾಡಿ ಪೂಜೆ ಮುಗಿಸಿಕೊಂಡು ಸಂಜೆ 7 ಗಂಟೆಗೆ ಗವಿರಂಗನಾಥಸ್ವಾಮಿ ಬೆಟ್ಟವನುನ ಬಿಟ್ಟೆವು. ಟ್ರಾಕ್ಟರ್ ಅನ್ನು ಆರೋಪಿ ಚಲಾಯಿಸುತ್ತಿದ್ದರು. ನಾವು ಊರಿಗೆ ಬರುತ್ತಿರುವುವಾಗ ಚೋರಗೊಂಡನಹಳ್ಳಿ ಕೆರೆ ಏರಿಯ ಮೇಲೆ ಎದುರಿನಿಂದ ಒಂದು ಲಾರಿ ಬಂದಿತ್ತು ನಮ್ಮ ಟ್ರಾಕ್ಟರ್ ಒಮ್ಮೆಲೇ ಪಲ್ಟಿ ಆಗಿತ್ತು ಇದರಿಂದ ನನ್ನ ಎಡಗಣ್ಣಿಗೆ, ಬಲಕೈಗೆ, ಎಡಗಾಲಿಗೆ ಸಾದಾರಣ ಸ್ವರೂಪದ ಗಾಯಗಳಾದವು. ಚಾಸಾ-2 ರವರಿಗೆ ತೀವ್ರ ಸ್ವರೂಪದ ಗಾಯಗಳಾದವು. ಚಾಸಾ-3, 4,6 ರವರಿಗೂ ಸಹ ಸಾಧಾರಣ ಸ್ವರೂಪದ ಗಾಯಗಳಾದವು. ಅಪಘಾತ ಹೇಗೆ ಆಯಿತು ನನಗೆ ಗೊತ್ತಿರುವುದಿಲ್ಲ. ಮೊದಲು ನಮಗೂ ಚಿ.ನಾ ಹಳ್ಳಿ ಆಸ್ಪತ್ರೆಗೆ ಕರೆದುಕೊಂಡು ಹೋದರು. ಚಾಸಾ2 ರವರನ್ನು ಹೆಚ್ಚಿನ ಚಿಕಿತ್ಸೆಗೆ ಹಾಸನಕ್ಕೆ ಕರೆದುಕೊಂಡು ಹೋದರು. ನಾನು ಪೋಲಿಸರಿಗೆ ಹೇಳಿಕೆ ಕೊಟ್ಟಿರುತ್ತೇನೆ. ನನಗೆ ಟ್ರಾಕ್ಟರ್ ನ ಸಂಖ್ಯೆ ಹೇಳಲು ಬರುವುದಿಲ್ಲ,

ಸಾಕ್ಷಿಯು ಟ್ರಕ್ಟರ್ ನ ಪೋಟೋ ನೋಡಿ ಗುರುತಿಸಿ ಅದನ್ನು ನಿಪಿ5 ಮತ್ತು 6 ಎಂದು ಗುರುತಿಸಲಾಗಿದೆ.

**(ಈ ಹಂತದಲ್ಲಿ ಸ.ಸ.ಅ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಅವರಿಗೆ ಪಾಟೀ ಸವಾಲು ಮಾಡಲು ಅನುಮತಿಸಬೇಕೆಂದು ಕೇಳಿಕೊಂಡ ಮೇರೆಗೆ ಅನುಮತಿಸಲಾಗಿದೆ)**

ಪಾಟೀ ಸವಾಲುಃ ಎ ಪಿ ಪಿ ರವರಿಂದಃ

ನಾವು ದಿನಾಂಕ 13/03/2024 ರಂದು ಗವಿರಂಗನಾಥಸ್ವಾಮಿ ಬೆಟ್ಟಕ್ಕೆ ಹೋಗಿ ಬರುತ್ತಿದ್ದೆವು ಎಂದರೆ ನಿಜ. ಆರೋಪಿ ಚಲಾಯಿಸುತ್ತಿದ್ದ ಟ್ರಾಕ್ಟರ್ ಸಂಖ್ಯೆ KA 44 TA 4471 ಹಾಗೂ ಟ್ರೈಲರ್ ಸಂಖ್ಯೆ KA 44 TA 4472 ಇರುತ್ತದೆ ಎಂದರೆ ನನಗೆ ಹೇಳಲು ಆಗುವುದಿಲ್ಲ. ಆ ದಿನ ಟ್ರಾಕ್ಟರ್ ಅನ್ನು ಆರೋಪಿಯು ಚೋರಗೊಂಡನಹಳ್ಳಿಯ ಕೆರೆ ಏರಿಯ ಮೇಲೆ ಅತಿವೇಗ ಮತ್ತು ಅಜಾಗರೂಕತೆಯಿಂದ ಚಲಾಯಿಸಿಕೊಂಡು ಹೋದ್ದರಿಂದ ಟ್ರಾಕ್ಟರ್ ಪಲ್ಟಿ ಆಯಿತು ಎಂದರೆ ಸರಿಯಲ್ಲ. ಆರೋಪಿಯ ತಪ್ಪಿನಿಂದ ಈ ಅಪಘಾತ ಆಗಿದ್ದರೂ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈಗ ಓದಿ ಹೇಳಿದಂತೆ ಪೋಲಿಸರಿಗೆ ನಿಶಾನೆ ಪಿ 9 ರಂತೆ ಹೇಳಿಕೆ ಕೊಟ್ಟಿರುತ್ತೇನೆ ಎಂದರ ಸರಿಯಲ್ಲ.

ಮರುವಿಚಾರಣೆಃ ಇರುವುದಿಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)**

ಓ.ಹೇ.ಕೆ.ಸರಿ ಇದೆ.

ಸಹಿ/-

ಹಿರಿಯ ಸಿವಿಲ್ ನ್ಯಾಯಾಧೀಶರು
ಹಾಗೂ ಜೆ.ಎಂ.ಎಫ್.ಸಿ. ನ್ಯಾಯಾಲಯ,
ಚಿಕ್ಕನಾಯಕನಹಳ್ಳಿ.